4.15 ಪಿ. ಎಂ.

ನಿಯಮ 334 ರ ಮೇರೆಗೆ

ವಿಷಯ :- 1) ಬಳ್ಳಾರಿ ನಲ್ಲಾದಿಂದ ಬೆಳಗಾವಿ ನಗರಕ್ಕೆ ಆಗುವ ಮಾಲಿನ್ಯ ತಡೆಗಟ್ಟುವುದು.

SRI. K. C. MODGEKAR DESAI :- Belgaum is a District Headquarters and is developing city. In the South of Belgaum city, a nullah named 'Bellary Nullah' originated and carries the sewage and other wastage. It passes through many villages such as Halga, Kudachi, Nilaji, Muchandi, Sulebhavi etc., before joining the Ghataprabha Dam.

This nullah has become an invitation to epidemic diseases like cholera, maleria and jaundice affecting the poor people who reside nearby the nullah in particular and other residents of the city in general, as the nulla is open and not covered. Further, the nullah, during the rainy season, causes a lot of hardship and losses to the farmers whose crops are damaged every year. These farmers are not paid any compensatoin for their losses.

I, therefore request the Government to take immediate steps to see that the portion of the nullah running through the city is properly covered and the rest of its is adequately deepened and bunded so as to avoid the losses to the farmers and also to protect the health of the citizens of Belgaum.

Further, many rich farmers make use of the wastage collected in the nullah as fertiliser of their farms for which they do not pay anything to the Corporation. I would like to suggest that this should be checked and they should be made to pay for it.

I would like to know when will the Government take up the work of bunding and covering the nallah.

SRI. K. J. GEORGE :- Sir I wish to make the following Statement.

ಬೆಳಗಾವಿ ನಗರ ಪಾಲಿಕೆಯ ಕೊಳಚೆ ನೀರು ಲೆಂಡಿ ನಾಲಾದ ಮೂಲಕ ಹರಿದು ಮುಂದೆ ಬಳ್ಳಾರಿ ನಾಲಾವನ್ನು ಸೇರುತ್ತದೆ. ಲೆಂಡಿ ನಾಲಾದ ಎಲ್ಲಾ ಭಾಗವನ್ನು ಆದಷ್ಟು ಹೊದಿಕೆ ಮಾಡಲಾಗಿದೆ. ಉಳಿದ ಭಾಗವನ್ನು ಪ್ರತಿ ವರ್ಷ ಕಡಿಮೆ ಕೊಳಚೆ ನೀರು ಹರಿಯುವಾಗ ಮಾಡಲಾಗುತ್ತಿದೆ. ಅಳವಾದ್ ಬಳಿ ಕೊಳಚೆ ನೀರು ಶುದ್ಧೀಕರಣದ ಘಟಕವನ್ನು ನಿರ್ಮಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಇದರ ನಿರ್ಮಾಣದ ಅಂದಾಜು ವೆಚ್ಚ ರೂ. 305 ಲಕ್ಷಗಳ ಯೋಜನೆ ತಯಾರಿಸಿ ಇದರ ನಿರ್ಮಾಣದ ಕೆಲಸವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಲಾಗಿದೆ. ಅಳವಾದ್ ಜನರು ಕೊಳಚೆ ನೀರು ಶುದ್ಧೀಕರಣ ಘಟಕದ ನಿರ್ಮಾಣವನ್ನು ತಮ್ಮ ಪರಿಸರದ ಬಳಿ ಮಾಡುವುದರ ವಿರುದ್ಧ ಪ್ರತಿಭಟಿಸುತ್ತಿದ್ದಾರೆ ಮತ್ತು ನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿಯ ಸಂಗ್ರಹಣೆಯ ದೃಷ್ಟಿಯಿಂದ ಸದರಿ ಘಟಕವನ್ನು ಕೈಗೆತ್ತಿಕೊಂಡಿರುವುದಿಲ್ಲ. ಕೊಳಚೆ ನೀರು ಶುದ್ಧೀಕರಣ ಘಟಕದ ಉದ್ದೇಶವು ಕೊಳಚೆ ನೀರಿನ ಶುದ್ಧೀಕರಣದ ನಂತರ ಬಳ್ಳಾರಿ ನಾಲಾಗೆ ಶುದ್ಧೀಕರಿಸಿದ ನೀರನ್ನು ಬಿಡುವುದಾಗಿರುತ್ತದೆ.

ಮಾನ್ಯ ಸದಸ್ಯರು ತಿಳಿಸಿರುವ ಇತರ ಸಲಹೆಗಳ ಬಗ್ಗೆ ಸರ್ಕಾರವು ಗಮನಹರಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

2) ಬಿಜಾಪುರ ಸಾರಿಗೆ ವಿಭಾಗಕ್ಕೆ ಹೆಚ್ಚು ಬಸ್ಸುಗಳನ್ನು ಮತ್ತು ಸಿಬ್ಬಂದಿಯನ್ನು ಒದಗಿಸುವುದು.

SRI. MANOHAR AINAPUR :– Sir will the Hon'ble Minister for Transport be pleased to state that Government is quite aware that Bijapur KSRTC division always gives maximum profit. Inspite of it Bijapur Division has been neglected by not providing required number of buses, and bus drivers and bus conductors are also not in adequate number. Bijapur Disrtict is a largest district in area in the State. Therefore, that measures Government will take to provide more buses and conductors and drivers to stop top travelling on buses by the passengers,.

SRI. NAZEER AHMED (MINISTER OF STATE FOR SMALLSCALE INDUSTRIES) :– Sir, On behalf of Hon'ble Minister for Transport I wish to make the followinng Statement.

ವಿಜಾಪುರ ಜಿಲ್ಲೆಯು ಕ್ಷೇತ್ರದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿಯೇ ದೊಡ್ಡ ಜಿಲ್ಲೆಯೆಂಬುದು ನಿಜ. ಆದರೆ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಜಾಪುರ ಜಿಲ್ಲೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಿರ್ಲಕ್ಷಿಸಲಾಗಿದೆ ಎಂದು ಹೇಳುವುದು ಸಮಂಜಸವಲ್ಲ.

ವಿಜಾಪುರ ವಿಭಾಗವು 1986–87 ರಲ್ಲಿ 45.36 ಲಕ್ಷ ರೂ., 1988–89 ರಲ್ಲಿ 457.42 ಲಕ್ಷ ರೂ. ಮತ್ತು 1989–90 ರಲ್ಲಿ 204.53 ಲಕ್ಷ ರೂ. ಗಳ ನಷ್ಟವನ್ನು ಅನುಭವಿಸಿದೆ. 1987–88 ರಲ್ಲಿ ಮಾತ್ರ 57.27 ಲಕ್ಷ ರೂ. ಲಾಭವನ್ನು ಗಳಿಸಿದೆ. 1986–87 ರ ಅಂತ್ಯಕ್ಕೆ 479 ಅನುಸೂಚಿಗಳ ಕಾರ್ಯಾಚರಣೆ ಮಾಡುತ್ತಿದ್ದ ಈ ವಿಭಾಗವು 1989–90 ರ ವೇಳೆಗೆ 581 ಅನುಸೂಚಿಗಳನ್ನು ಕಾರ್ಯಗತಗೊಳಿಸಿತ್ತು. ಈ ಪ್ರಕಾರ 1986–87 ರಿಂದ 1989–90 ರ ಅವಧಿಯಲ್ಲಿ 102 ಅನುಸೂಚಿಗಳನ್ನು ಹೊಸದಾಗಿ ಹೆಚ್ಚಿಸಿತ್ತು ಮತ್ತು 1989–90 ರಸ್ಥಿತ್ಯಂತರಕ್ಕೆ ವಾಹನ ಸಮೂಹದ ಗಾತ್ರವನ್ನು 1986–87 ರ 520 ವಾಹನಗಳಿಂದ 633 ವಾಹನಗಳಿಗೆ ಹೆಚ್ಚಿಸಿತು. ಇದರಿಂದ ಪ್ರಯಾಣಿಕರ ಸಾರಿಗೆ ಅಗತ್ಯತೆಗಳನ್ನು ಪೂರೈಸಲು ಸಾಕಷ್ಟು ವಾಹನಗಳನ್ನು ಒದಗಿಸಲಾಗಿತ್ತೆಂಬುದು ಪ್ರಚಾರ ಪಡಿಸಿದಂತಾಗುತ್ತದೆ.